# ಅಳುವ ಹೂಗಳು

■ ಸುಮಂಗಲಾ ಎಸ್. ಮುಮ್ಮಿಗಟ್ಟಿ

ಕಲೆ: ಭಾವು ಪತ್ತಾರ

ಅದು ಮುಸ್ಸಂಜೆಯ ಸಮಯ. ಕೆಂಪು ಕರಗಿ ಕತ್ತಲಾವರಿಸಲು ಪ್ರಾರಂಭವಾಗಿತ್ತು. ಪೆರುವಿನ ಮಾಚುಪಿಚುವಿನ ಅರಮನೆಯಲ್ಲಿ ಸಂಭ್ರಮದ ವಾತಾವರಣ. ಎಲ್ಲೆಡೆ ದೀಪಗಳನ್ನು ಬೆಳಗಿಸಿದ್ದರು. ಬಂಗಾರದ ತಗಡುಗಳನ್ನು ಹೊದಿಸಿದ ಅರಮನೆಯ ಗೋಡೆಗಳು ದೀಪದ ಬೆಳಕನ್ನು ಪ್ರತಿಫಲಿಸಿ ಮತ್ತಷ್ಟು ಪ್ರಕಾಶವನ್ನು ಚಿಮ್ಮುತ್ತಿದ್ದವು. ಅರಮನೆಯ ಸಭಾಂಗಣಕ್ಕೆ ವಿಶೇಷ ಅಲಂಕಾರವನ್ನು ಮಾಡಲಾಗಿತ್ತು. ಯುದ್ಧದಲ್ಲಿ ಗೆದ್ದ ಸಂಭ್ರಮಾಚರಣೆಯೊಂದಿಗೆ, ಶೌರ್ಯವನ್ನು ಮೆರೆದ ಸೈನಿಕರಿಗೆ ವಿಶೇಷ ಸನ್ಮಾನವನ್ನು ಆಯೋಜಿಸಲಾಗಿತ್ತು. ಸೈನಿಕರು ತಮ್ಮ ವಿಶೇಷ ಉಡುಪುಗಳೊಂದಿಗೆ ಬಂದು ಸೇರಲು ತೊಡಗಿದರು.

ಇತ್ತ ಅರಮನೆಯ ಒಳಗೆ ರಾಜ ರಾಣಿಯರು ಸಹ ಸಭಾಂಗಣಕ್ಕೆ ಹೋಗಲು ತಯಾರಾಗುತ್ತಿದ್ದರು. ಮಹಾರಾಜನ ಬಂಗಾರದ ಎದೆಗವಚ ಫಳಫಳನೇ ಹೊಳೆಯುತ್ತಿತ್ತು. ಮಹಾರಾಣಿಯಂತೂ ವಿಶೇಷವಾಗಿ ಅಲಂಕರಿಸಿಕೊಂಡಿದ್ದಳು. ಮೊದಲೇ ಚಿನ್ನದ ನಾಡು. ಜನಸಾಮಾನ್ಯರ ಬಳಿಯೇ ಸಾಕಷ್ಟು ಚಿನ್ನವಿತ್ತು. ಅದಕ್ಕೆಂದೇ ಈ ನಾಡನ್ನು ಸ್ಪಾನಿಷರು 'ಎಲ್ ಡೊರಾಡೋ' (ಚಿನ್ನದ ನಾಡು) ಎಂದು ಕರೆದಿದ್ದರು. ಅಂದಮೇಲೆ ಅರಮನೆಯ ಸಿರಿವಂತಿಕೆಯನ್ನು ಕೇಳಬೇಕೇ? ಎಲ್ಲವೂ ಸ್ವರ್ಣಮಯವಾಗಿತ್ತು. ದಾಸಿಯನ್ನು ಚಪ್ಪಾಳೆ ತಟ್ಟಿ ಕರೆದ ರಾಣಿ, 'ರಾಜಕುಮಾರಿ ತಯಾರಾಗಿದ್ದಾಳೆಯೇ? ನೋಡು' ಎಂದು ಹೇಳಿದಳು. ದಾಸಿ ರಾಜಕುಮಾರಿಯ ಕೊಠಡಿಯತ್ತ ಓಡಿದಳು.

ರಾಜಕುಮಾರಿಯ ಕೊಠಡಿಯಲ್ಲಿ ಆಕೆಯ ಸಖಿಯರೊಂದಿಗೆ ಆಕೆ ನಡೆಸಿದ್ದ ಮಾತು, ನಗು, ಸಂಭ್ರಮಗಳು ದೂರದಿಂದಲೇ ಕೇಳಿಬರುತ್ತಿದ್ದವು. 'ರಾಜಕುಮಾರಿ, ಮಹಾರಾಣಿಯವರು ಸಭೆಗೆ ಹೋಗಲು ತಾವು ಸಿದ್ಧವಾಗಿದ್ದೀರಾ ಎಂದು ನೋಡಿ ಬರಲು ಕಳಿಸಿದರು' ಎಂದಾಗ ಸಖಿಯರ ನಡುವಿಂದ ಸೌಂದರ್ಯದ ಖನಿಯಂತಿದ್ದ ರಾಜಕುಮಾರಿ ಕಂಡುಬಂದಳು. ತುಂಬು ಹರೆಯದ ಆಕೆ ಬಂಗಾರದ ನಾಡಿನ ಸ್ವರ್ಣ ಪುತ್ಥಳಿಯಂತಿದ್ದಳು. ವಿಶೇಷ ಅಲಂಕಾರ ಆಕೆಯ ಚೆಲುವಿನ ಮೆರುಗನ್ನು ಮತ್ತಷ್ಟು ಹೆಚ್ಚಿಸಿತ್ತು.

'ನಾನು ನನ್ನ ಸಖಿಯರೊಂದಿಗೆ ಸಭಾಂಗಣಕ್ಕೆ ಬರುತ್ತೇನೆ. ನನ್ನ ಕೇಶಾಲಂಕಾರವಿನ್ನೂ ಮುಗಿದಿಲ್ಲ. ಅವರು ನನಗಾಗಿ ಕಾಯುವುದು ಬೇಡ ಎಂದು ಮಹಾರಾಣಿಯವರಿಗೆ ತಿಳಿಸು' ಎಂದಳು. 'ಎಲ್ಲ ಅಲಂಕಾರ ಮುಗಿದಿದೆ. ಕೇಶಾಲಂಕಾರದಲ್ಲಿ ಹೊಳೆವ ಹರಳುಗಳನ್ನು ಹುದುಗಿಸಿದ ಆಭರಣಗಳು ಕಣ್ಣು ಕೋರೈಸುತ್ತಿವೆ. ಆದರೆ ಇನ್ನೂ ಅಲಂಕಾರ ಮುಗಿದಿಲ್ಲ ಎನ್ನುತ್ತಾರೆ ರಾಜಕುವರಿ' ಎಂದುಕೊಳ್ಳುತ್ತ ದಾಸಿ ಮಹಾರಾಣಿಯ ಅಂತಃಪುರಕ್ಕೆ ಬಂದು ಸುದ್ದಿಯನ್ನು ತಲುಪಿಸಿದಳು. 'ನಮ್ಮ ಮಗಳಿಗಿನ್ನೂ ಹುಡುಗಾಟವೇ ಹೋಗಿಲ್ಲ' ಎಂದುಕೊಳ್ಳುತ್ತ ಯುದ್ಧ ಗೆದ್ದ ಸಂತಸದಲ್ಲಿದ್ದ ರಾಜ ರಾಣಿಯರು ಹೆಚ್ಚೇನೂ ತಲೆ ಕೆಡಿಸಿಕೊಳ್ಳದೆಯೇ ಸಭಾಂಗಣದತ್ತ ನಡೆದರು. ಅವರನ್ನು ಹಿಂಬಾಲಿಸಿ ಭಟರು,

